# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

**ಬೆಂಗಳೂರು**

**ಹೆಚ್.ಆರ್.ಸಿ.ಸಂಖ್ಯೆ: 3510/10/31/2020(SB-3)**

**ದಿನಾಂಕ: 12-07-2021**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

**ಶ್ರೀಮತಿ ಜಯಲಕ್ಷ್ಮಿ ಎಸ್,**
**ಕೋಂ ಅಂಬರೀಶ್,**
**ನಂ.443, 5ನೇ ಅಡ್ಡರಸ್ತೆ,**
**ಜನತಾ ಕಾಲೋನಿ,**
**ಹುಳಿಮಾವು, ಬಿ.ಜಿ.ರಸ್ತೆ,**
**ಬೆಂಗಳೂರು-560076.**

## ಆದೇಶ

ಶ್ರೀಮತಿ ಜಯಲಕ್ಷ್ಮೀ ರವರು ಆಯೋಗಕ್ಕೆ ದೂರು ಸಲ್ಲಿಸಿ, ಹುಳಿಮಾವು ಆರಕ್ಷಕ ಠಾಣೆಯ ಎಸ್.ಐ ಶ್ರೀ ಚಿದಾನಂದ ರವರು ದೂರುದಾರರ ಮನೆಗೆ ನುಗ್ಗಿ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ಹಲ್ಲೆ ಮಾಡಿ ಠಾಣೆಗೆ ಕರೆದುಕೊಂಡು ಹೋಗಿ, ಇಡೀ ರಾತ್ರಿ ಇಟ್ಟುಕೊಂಡು ಸುಳ್ಳು ಕೇಸು ದಾಖಲಿಸಿ, ರೌಡಿ ಪಟ್ಟಿ ತೆರೆಯುವುದಾಗಿ ಬೆದರಿಕೆ ಹಾಕಿರುತ್ತಾರೆ. ದೂರುದಾರರ ಗಂಡ ಆರೋಪಿ ಸ್ಥಾನದಲ್ಲಿದ್ದರೆ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಿ ಶಿಕ್ಷೆ ನೀಡಲಿ, ಆದರೆ ದೂರುದಾರರು ಏನು ತಪ್ಪು ಮಾಡಿಲ್ಲವಾದರೂ ಅವರ ಮನೆಗೆ ನುಗ್ಗಿ ಮಹಿಳೆಯರಾದ ಅವರುಗಳ ಮೇಲೆ ಅಮಾನುಷವಾಗಿ ವರ್ತಿಸಿ ಹಲ್ಲೆ ಮಾಡಿ ಕೆಟ್ಟಪದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿ ಅಕ್ರಮವಾಗಿ ಠಾಣೆಗೆ ಕರೆದುಕೊಂಡು ಹೋಗಿ ರಾತ್ರಿ ಇಡೀ ಠಾಣೆಯಲ್ಲೆ ಇಟ್ಟುಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುವ ಬಗ್ಗೆ ದೂರರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿನ ಬಗ್ಗೆ ಉಪ ಆರಕ್ಷಕ ಆಯುಕ್ತರು, ಆಗ್ನೇಯ ವಿಭಾಗ, ಬೆಂಗಳೂರು ಅವರು ಆಯೋಗಕ್ಕೆ ವರದಿ ಸಲ್ಲಿಸಿ, ಅರ್ಜಿದಾರರ ಗಂಡ ಅಂಬರೀಶ್ ಈತನು ಹುಳಿಮಾವು ಆರಕ್ಷಕ ಠಾಣೆ ಸೇರಿದಂತೆ ಬೆಂಗಳೂರು ನಗರದ ವೈಯಾಲಿಕಾವಲ್, ಪೀಣ್ಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬನ್ನೇರುಘಟ್ಟ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತದೆ. ಅಲ್ಲದೇ ಆರಕ್ಷಕ ಆಯುಕ್ತರು ಆದೇಶ ಸಂಖ್ಯೆ; ಸಿಆರ್ಎಂ(4)/ಡಿಟಿಎನ್/11/2020, ದಿನಾಂಕ: 09.10.2020 ರಲ್ಲಿ ಅಂಬರೀಶ್

ಈತನನ್ನು ಗೂಂಡಾ ಕಾಯ್ದೆಯಡಿಯಲ್ಲಿ ಬಂಧಿಸಲು ಸೂಚಿಸಿ ಹೊರಡಿಸಿದ್ದ ಆಜ್ಞೆಯನ್ವಯ ದಿನಾಂಕ: 14.10.2020 ರಂದು ಆತನನ್ನು ಬಂಧಿಸಿ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕಳುಹಿಸಿರುತ್ತದೆ. ಅಲ್ಲದೇ ಅರ್ಜಿದಾರರು ಅವರ ಮನೆಯ ಬಳಿ ಹೋದ ಕರ್ತವ್ಯ ನಿರತ ಪೊಲೀಸರಿಗೆ ಕರ್ತವ್ಯಕ್ಕೆ ಅಡ್ಡಪಡಿಸಿ ಸಮವಸ್ತ್ರದಲ್ಲಿದ್ದ ಮಹಿಳಾ ಪೊಲೀಸರನ್ನು ಹಿಡಿದು ಎಳೆದಾಡಿದ್ದು ಈ ಸಂಬಂಧ ಅರ್ಜಿದಾರರು ಮತ್ತು ಅವರ ಅಕ್ಕ ಹಾಗೂ ತಂಗಿಯ ಮೇಲೆ ಹುಳಿಮಾವು ಠಾಣೆಯಲ್ಲಿ ಮೊ.ಸಂಖ್ಯೆ: 185/2020 ಕಲಂ 353, 504, 506 ರೆ/ವಿ 34 ಐ.ಪಿ.ಸಿ ರೀತ್ಯಾ ಪ್ರಕರಣ ಸಹಾ ದಾಖಲಾಗಿರುತ್ತದೆ.

ಅರ್ಜಿದಾರರ ಆರೋಪಗಳು ವಿಚಾರಣಾ ಕಾಲದಲ್ಲಿ ದೃಢಪಟ್ಟಿರುವುದಿಲ್ಲ. ಹುಳಿಮಾವು ಆರಕ್ಷಕ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಶ್ರೀ ಚಿದಾನಂದ ನಾವಿ ರವರ ವಿರುದ್ಧ ಅರ್ಜಿದಾರರು ಕಪೋಲಕಲ್ಪಿತವಾದ ದೂರು ಅರ್ಜಿಯನ್ನು ನೀಡಿರುವುದು ಕಂಡುಬಂದಿರುತ್ತದೆ. ಈ ರೀತಿಯ ದೂರು ಅರ್ಜಿಗಳು ಒಬ್ಬ ಸರ್ಕಾರಿ ಅಧಿಕಾರಿಯ ಧೈರ್ಯ ಮತ್ತು ಮನೋಸ್ಥೈರ್ಯ ಕುಗ್ಗಿಸುತ್ತವೆ. ಆದರೂ ದೂರಿನ ಸಂಬಂಧ ಎದುರುದಾರರಾದ ಆರಕ್ಷಕ ಉಪ ನಿರೀಕ್ಷಕರು ಶ್ರೀ ಚಿದಾನಂದ ನಾವಿ ರವರಿಗೆ ಸೂಕ್ತ ತಿಳುವಳಿಕೆಯನ್ನು ಸಹಾ ನೀಡಲಾಗಿರುತ್ತದೆ. ಈ ಸಂಬಂಧ ಅರ್ಜಿದಾರರಿಗೆ ಹಿಂಬರಹ ಸಹಾ ನೀಡಲಾಗಿದ್ದು, ಅರ್ಜಿದಾರರು ಮಾಡಿರುವ ಆರೋಪಗಳು ವಿಚಾರಣಾ ಕಾಲದಲ್ಲಿ ದೃಡಪಡದೇ ಇರುವುದರಿಂದ ದೂರು ಅರ್ಜಿಯ ವಿಚಾರಣೆಯನ್ನು ಮುಕ್ತಾಯ ಮಾಡಲು ವರದಿಯನ್ನು ನೀಡಿರುತ್ತಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿದ್ದು, ದಿನಾಂಕ: 15.01.2021 ರಂದು ಅಭಿಪ್ರಾಯವನ್ನು ಸಲ್ಲಿಸಿ, ಅರ್ಜಿದಾರರಿಗೆ ಒಂದು ಹೆಣ್ಣು ಮಗು ಆಗಿದ್ದು ಅವರಿಗೆ ಯಾವುದೇ ರೀತಿಯ ಅನ್ಯಾಯ ನಡೆಯದಂತೆ ಈ ವಿಚಾರದಲ್ಲಿ ಆರಕ್ಷಕ ಉಪ ನಿರೀಕ್ಷಕರು ಶ್ರೀ ಚಿದಾನಂದ್ ಎಂಬುವವರು ದಿನಾಂಕ: 09.10.2020 ರಂದು ರಾತ್ರಿ ಸುಮಾರು 12.30 ಗಂಟೆ ರಿಂದ ದಿನಾಂಕ: 10.10.2020 ರಂದು ಸಂಜೆ 06.00 ಗಂಟೆಯವರೆಗೆ ಅರ್ಜಿದಾರರನ್ನು ಹುಳಿಮಾವು ಆರಕ್ಷಕ ಠಾಣೆಯ ಒಳಗಡೆ ಇಟ್ಟುಕೊಂಡು ಇರುವುದಕ್ಕೆ ಮುಖ್ಯ ಸಾಕ್ಷಿ ಏನೆಂದರೆ ಆಕೆಯ ಮೊಬೈಲ್ ಟವರ್ ಲೋಕೇಶನ್ ಹಾಗೂ ಹುಳಿಮಾವು ಠಾಣೆಯಿಂದಲೆ ಆಕೆಯ ಪರಿಚಯಸ್ಥರಿಗೆ ಫೋನ್ ಮಾಡು ಎಂದು, ಆಕೆಯ ಗಂಡ ಎಲ್ಲಿ ಇದ್ದಾನೆ ಎಂದು ಆಕೆಯ ಮೊಬೈಲ್‌ನಿಂದ ಪೊಲೀಸರೆ ಕರೆ ಮಾಡಿಸಿರುತ್ತಾರೆ. ಆದುದರಿಂದ ಆಕೆಯ ಮೊಬೈಲ್ ನಂಬರ್‌ನಿಂದ ದಿನಾಂಕ: 09.10.2020 ಮತ್ತು 10.10.2020ರಂದು ಯಾರು ಯಾರಿಗೆ ಕರೆ ಮಾಡಿರುತ್ತಾರೆಂದು  ತಿಳಿದು ಕೊಳ್ಳಲು ಆಕೆಯ ಟವರ್ ಲೋಕೇಶನ್‌ನ್ನು ಪಡೆದುಕೊಂಡು ಹುಳಿಮಾವು ಆರಕ್ಷಕ ಠಾಣೆಯ ಎಸ್.ಐ ಚಿದಾನಂದ್ ರವರು ಉಪ ಆಯುಕ್ತರಿಗೆ ಸುಳ್ಳು ಹೇಳಿಕೆ ನೀಡಿರುವುದರ ಬಗ್ಗೆ ಕಾನೂನು ರೀತಿ ಕ್ರಮ ಜರುಗಿಸಬೇಕಾಗಿ ವಿನಂತಿಸಿಕೊಂಡಿರುತ್ತಾರೆ.

ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಆರಕ್ಷಕ ಉಪ ನಿರೀಕ್ಷಕರು ಶ್ರೀ ಚಿದಾನಂದ್ ಎಂಬುವವರು ದಿನಾಂಕ: 09.10.2020 ರಂದು ರಾತ್ರಿ ಸುಮಾರು 12.30 ಗಂಟೆ ಯಿಂದ ದಿನಾಂಕ: 10.10.2020 ಸಂಜೆ 06.00 ಗಂಟೆಯವರೆಗೆ ದೂರುದಾರರಿಗೆ ಹುಳಿಮಾವು ಆರಕ್ಷಕ ಠಾಣೆಯಲ್ಲಿ ಇಟ್ಟಿರುವುದಾಗಿ ಅಭಿಪ್ರಾಯದಲ್ಲಿ ತಿಳಿಸಿರುವುದರಿಂದ, ಶ್ರೀ ಚಿದಾನಂದ ನಾವಿ, ಆರಕ್ಷಕ ಉಪನಿರೀಕ್ಷಕರು, ಹುಳಿಮಾವು ಆರಕ್ಷಕ ಠಾಣೆ, ಬೆಂಗಳೂರು ನಗರ ರವರಿಗೆ ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993, ಕಲಂ 13 ರ ಅಡಿ ನೋಟೀಸ್ ಜಾರಿ ಮಾಡಿ, ದಿನಾಂಕ: 20.03.2021 ರಂದು 12.00 ಗಂಟೆಗೆ ಆಯೋಗದ ಮುಂದೆ ಖುದ್ದಾಗಿ ವಿಚಾರಣೆಗೆ ಹಾಜರಾಗಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚನೆ ನೀಡಿದ್ದು, ಹಾಗೂ ಸದರಿ ದಿನಾಂಕದಂದು ದೂರುದಾರರಾದ ಶ್ರೀಮತಿ ಜಯಲಕ್ಷ್ಮೀ ಕೋಂ ಅಂಬರೀಶ್ ರವರಿಗೆ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಲಾಗಿದ್ದು, ಅದರಂತೆ ದಿನಾಂಕ:20.03.2021 ರಂದು ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರು ಅವರ ಅಕ್ಕ ಶ್ರೀಮತಿ ವಸಂತರವರದೊಂದಿಗೆ ಹಾಗೂ ಹುಳಿಮಾವು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರಾದ ಶ್ರೀ ಚಿದಾನಂದ ನಾವಿ ರವರು ಆಯೋಗದ ಮುಂದೆ ಖುದ್ದು ಹಾಜರಾಗಿದ್ದು, ದೂರುದಾರರು ಹಾಗೂ ಚಿದಾನಂದ ನಾವಿ ರವರು ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ.

ದಿನಾಂಕ.20.03.2021 ರಂದು ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:

> "ನಾನು ಜಯಲಕ್ಷ್ಮೀ, ಗಂಡ ಶ್ರೀ ಅಂಬರೀಶ್ .ಕೆ ವಯಸ್ಸು; 27 ನಂ, 443, 5ನೇ ಕ್ರಾಸ್ ಜನತಾ ಕಾಲೋನಿ, ಹುಳಿಮಾವು ಬನ್ನೇರುಘಟ್ಟ ರೋಡ್, ಬೆಂಗಳೂರು 76. ದೇವರ ಹೆಸರಿನಲ್ಲಿ ಪ್ರಮಾಣಮಾಡಿ ಈ ಹೇಳಿಕೆಯನ್ನು ನೀಡುತ್ತಿದ್ದೇನೆ. ನಾನು ಮತ್ತು ನನ್ನ ಗಂಡ ಅಂಬರೀಶ್ .ಕೆ ಮತ್ತು ಇಬ್ಬರು ಮಕ್ಕಳು, ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ದಿನಾಂಕ 9/10/2020 ಶುಕ್ರವಾರ ರಾತ್ರಿ 12.00ಗೆ ಹುಳಿಮಾವು ಸ್ಟೇಷನ್ ನಿಂದ ಸಬ್ ಇನ್ಸ್‌ಪೆಕ್ಟರ್ ಶ್ರೀ ಚಿದಾನಂದ ನಾವಿ ಮತ್ತು ನಾಲ್ಕು ಜನ ಸಿಬ್ಬಂದಿಗಳು ನಮ್ಮ ಮನೆಯ ಹತ್ತಿರ ಬಂದು ಬಾಗಿಲು ಬಡಿದರು. ನಾವು ಯಾರು ಎಂದು ನೋಡಿದ್ದಾಗ ನಿನ್ನ ಗಂಡ ಎಲ್ಲಿ ಎಂದು ಕೇಳಿದ್ದರು. ಗೊತ್ತಿಲ್ಲ ಎಂದು ನನ್ನ ತಂಗಿ ಪವಿತ್ರ ಯಾಕೆ ಸಾರ್ ಎಂದು ಕೇಳಿದ್ದರು ಆಗ ಅವರನ್ನು ನಿಮಗೆ ಯಾಕೆ ಹೇಳಬೇಕು ಎಂದು ಹಲ್ಲೆಮಾಡಿ ಕೆಟ್ಟ ಪದಗಳಿಂದ ನಿಂದಿಸಿ ನಮ್ಮ ದೊಡ್ಡಮ್ಮನ ಮಗಳು ನಮ್ಮ ಮನೆಯಲ್ಲಿ ಇದ್ದರು ಅವರಿಗೂ ಭಯಪಡಿಸಿದರು. ಆಮೇಲೆ ಲೇಡಿ ಪಿ.ಸಿ. ಶೋಭ ಮತ್ತು ಹೇಮಾ ಅವರನ್ನು ಕರೆಸಿ ನನ್ನ ಅಕ್ಕ ರಂಜಿನಿ ಮತ್ತು ನನ್ನನ್ನು ಹುಳಿಮಾವು ಸ್ಟೇಷನ್ ಗೆ ಕರೆದುಕೊಂಡು ಹೋಗಿ ಸ್ಟೇಷನ್ ನಲ್ಲಿ ಹೇಮ ಮತ್ತು ಶೋಭ ಅವರಿಂದ ದೈಹಿಕ ಹಲ್ಲೆ ನಡೆಸಿ ನಿನ್ನ ಗಂಡ ಎಲ್ಲಿ ಇದ್ದಾನೆ ಅಂತ ಹೇಳು ಇಲ್ಲವಾದರೆ ನಿನ್ನ ಮೇಲೆ ಕೇಸ್‌ನ್ನು ಹಾಕಿ ರೌಡಿ

ಪಟ್ಟಿ ತೆರೆಯುತ್ತೇನೆ. ಮತ್ತು ನಿನ್ನ ಗಂಡನ ಜೊತೆ ನಿನ್ನನ್ನು ಮತ್ತು ನಿನ್ನ ಮಕ್ಕಳನ್ನು ಜೈಲಿಗೆ ಕಳುಹಿಸುತ್ತೇನೆ ಪೋಲಿಸ್ ಠಾಣೆಗೆ ಸಂಬಂಧಿಕರು ಮತ್ತು ಮಕ್ಕಳು ಬಂದಿದ್ದರು ಸಹ ನನ್ನನ್ನು ನೋಡಲು ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ. ನನ್ನ ಮಕ್ಕಳು ಬೆಳಗ್ಗೆ 5 ಗಂಟೆಯವರೆಗೂ ಸ್ಟೇಷನ್ ಮುಂದೆ ಕುಳಿತ್ತಿದ್ದರು, ಅವರನ್ನು  ನನ್ನನ್ನು ನೋಡಲು ಬಿಟ್ಟಿಲ್ಲ. ಅಲ್ಲಿಂದ ಪರಿಚಯಿಸ್ಥರಿಗೆ ನಿನ್ನ ಗಂಡ ಎಲ್ಲಿದ್ದಾರೆ ಎಂದು ರಾತ್ರಿ 12 ಗಂಟೆಯಿಂದ ಶನಿವಾರ 6 ಗಂಟೆಯವರೆಗೆ ನನ್ನ ಫೋನಿನಿಂದ ನಂ 9739463714 ಯಿಂದ ಫೋನನ್ನು ಮಾಡಿಸಿರುತ್ತಾರೆ. ಮತ್ತು ಶನಿವಾರ ಸಂಜೆ 6 ಗಂಟೆಗೆ ಅವರೇ ಬಿಟ್ಟು ಕಳುಹಿಸಿದ್ದಾರೆ. ಮಂಗಳವಾರ ನ್ಯೂಸ್ ಪೇಪರ್‌ನಲ್ಲಿ (ಕನ್ನಡ ಪ್ರಭ) ತಪ್ಪಿಸಿಕೊಂಡು ತಿರುಗುತ್ತಿದ್ದಾರೆಂದು ಸುದ್ದಿಗೋಷ್ಠಿ ಮಾಡಿದ್ದಾರೆ. ಇದರಿಂದ ಅಕ್ಕಪಕ್ಕದ ಮನೆಯವರು ನಮ್ಮ ಜೊತೆ ಸರಿಯಾಗಿ ಮಾತನಾಡುವುದಿಲ್ಲ. ನನ್ನ ಮಕ್ಕಳು ಇವತ್ತಿಗೂ ಭಯದಿಂದ ಮಲಗುತ್ತಿದ್ದಾರೆ. ಅಮ್ಮ ಇವತ್ತು ನಿನ್ನನ್ನು ಕರೆದುಕೊಂಡು ಹೋಗುತ್ತಾರೆ ಎಂದು ಭಯಪಡುತ್ತಿದ್ದಾರೆ. ನನ್ನ ಗಂಡ ತಪ್ಪು ಮಾಡಿದ್ದಲ್ಲಿ ಅವರಿಗೆ ಕಾನೂನು ರೀತಿಯ ಶಿಕ್ಷೆಯಾಗಲಿ ನಾನು ಮತ್ತು ನನ್ನ ಮಕ್ಕಳಿಗೆ ಅನ್ಯಾಯವಾಗಿದೆ. ನನಗೆ ಪೋಲಿಸರ ಮೇಲೆ ನಂಬಿಕೆ ಇಲ್ಲ. ನನಗೆ ಆಯೋಗದ ಮೇಲೆ ನಂಬಿಕೆ ಇದೆ. ನನ್ನ ಮೊಬೈಲ್ ಟವರ್ ಲೊಕೇಶನ್ ಪಡೆದು 9739463714 ದಯವಿಟ್ಟು ನನಗೆ ನ್ಯಾಯವನ್ನು ಒದಗಿಸಿಕೊಡಿ."

ದಿನಾಂಕ.20.03.2021 ರಂದು ಹುಳಿಮಾವು ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಾದ ಶ್ರೀ ಚಿದಾನಂದ ನಾವಿ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಕೆಳಕಂಡಂತೆ ಇದೆ:

"ನಾನು ಚಿದಾನಂದ ನಾವಿ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಹುಳಿಮಾವು ಪೊಲೀಸ್ ಠಾಣೆ, ಆಗ್ನೇಯ ವಿಭಾಗ,  ಬೆಂಗಳೂರು ನಗರ ದೂರವಾಣಿ ಸಂಖ್ಯೆ: (9740504342) ಆದ ನಾನು ಹುಳಿಮಾವು ಪೊಲೀಸ್ ಠಾಣೆಯಲ್ಲಿ 3 ವರ್ಷದಿಂದ ಸಬ್‌ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಕೆಳಕಂಡಂತೆ ಹೇಳಿಕೆ ನೀಡುತ್ತಿದ್ದೇನೆ. ದಿನಾಂಕ: 09/10/2020 ರಂದು ಮಾನ್ಯ ಪೊಲೀಸ್ ಆಯುಕ್ತರು ಬೆಂಗಳೂರು ನಗರ ರವರ ಆದೇಶದಂತೆ ಹುಳಿಮಾವು ಪೊಲೀಸ್ ಠಾಣೆಯ ರೌಡಿ ಪಟ್ಟಿ ಆಸಾಮಿಯಾದ ಶ್ರೀ ಅಂಬರೀಶ ಈತನ ವಿರುದ್ಧ ಗೂಂಡಾ ಕಾಯ್ದೆ ಅಡಿಯಲ್ಲಿ ಬಂಧನದ ಆದೇಶವನ್ನು ಜಾರಿಗೊಳಿಸಲು ಮಾನ್ಯ ಪೊಲೀಸ್ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ ಅವರು ನನಗೆ ಮತ್ತು ಸಿಬ್ಬಂದಿಗಳಾದ ಶ್ರೀ ನಾಗರಾಜ್ ಹೆಚ್.ಸಿ 6089, ಹೆಚ್.ಸಿ 7967, ಶ್ರೀ ನರೇಂದ್ರ ಬಾಬು ಹೆಚ್.ಸಿ 7945 ಶ್ರೀ ಪರಮೇಶ್ ಹಾಗೂ ಮಹಿಳಾ ಪೊಲೀಸ್ 16109 ಕುಮಾರಿ ಶೋಭಾ ಮತ್ತು ಮಹಿಳಾ ಪೊಲೀಸ್ 16114, ಶ್ರೀಮತಿ ಹೇಮ ಅವರಿಗೆ ಜ್ಞಾಪನ ನೀಡಿದರು. ಅದರಂತೆ ನಾನು ನನಗೆ ದೊರೆತ ಮಾಹಿತಿಯಂತೆ ರೌಡಿ ಅಸಾಮಿ ಅಂಬರೀಶ್ ವಾಸವಿರುವ ಹುಳಿಮಾವು ಗ್ರಾಮದ ಜನತಾ ಕಾಲೋನಿಯ 5ನೇ ಕ್ರಾಸ್ ನಲ್ಲಿರುವ ಮನೆ ನಂ. 444 ಹತ್ತಿರ ಹೋಗಿ ನೋಡಿದಾಗ ಆತನು ಸದರಿ ಮನೆ ಖಾಲಿ ಮಾಡಿಕೊಂಡು ಅದೇ ರಸ್ತೆಯ ಮನೆ ನಂ. 167ರಲ್ಲಿ ವಾಸವಾಗಿರುವುದಾಗಿ ದೊರೆತ ಖಚಿತ ಮಾಹಿತಿ ಪಡೆದು ರಾತ್ರಿ ಸುಮಾರು 10-30 ಗಂಟೆಗೆ ನಾವೆಲ್ಲರು ಮೇಲ್ಕಂಡ

ಸಿಬ್ಬಂದಿಗಳು ಸದರಿ ಮನೆಯ ಹತ್ತಿರ ಹೋಗಿ ಬಾಗಿಲು ಬಡಿದಾಗ ಬಾಗಿಲ ಬಳಿ ನಿಂತುಕೊಂಡಿದ್ದ ಪವಿತ್ರ ಎಂಬುವವರು ಏರು ದನಿಯಲ್ಲಿ ನೀವು ಯಾಕೆ ಇಷ್ಟೊತ್ತಿಗೆ ನಮ್ಮ ಮನೆಯ ಹತ್ತಿರ ಬಂದಿದ್ದೀರಾ? ನಮ್ಮ ಭಾವ ಏನು ತಪ್ಪು ಮಾಡಿದ್ದಾರೆ? ನಮ್ಮ ಭಾವ ಯಾರು ಗೊತ್ತಲ್ಲಾ? ಎಂದು ಜೋರಾಗಿ ಮಾತನಾಡಿದರು. ನಂತರ ಶ್ರೀ ಅಂಬರೀಶನ ಹೆಂಡತಿ ಶ್ರೀಮತಿ ಜಯಲಕ್ಷ್ಮೀ ರವರು ಏರು ದನಿಯಲ್ಲಿ ಏಕೆ ನೀವು ಯಾವಾಗಲು ನಮ್ಮ ಮನೆಯ ಹತ್ತಿರ ಬಂದು ತೊಂದರೆ ಕೊಡುತ್ತೀರಾ? ನನ್ನ ಗಂಡ ಎಷ್ಟೊತ್ತಿಗಾದರು ಹೋಗುತ್ತಾರೆ ಎಷ್ಟೊತ್ತಿಗಾದರು ಬರುತ್ತಾರೆ ಅದನ್ನು ಕೇಳುವುದಕ್ಕೆ ನೀವು ಯಾರು ಎಂದು ಜೋರಾಗಿ ಕೂಗಾಡಲು ಪ್ರಾರಂಭಿಸಿದರು ಹಾಗೂ ಜಯಲಕ್ಷ್ಮಿಯವರ ಅಕ್ಕ ಶ್ರೀಮತಿ, ರಂಜಿನಿ ಕೂಡ ಬಾಗಿಲಿಗೆ ಅಡ್ಡ ನಿಂತು ನೀವು ಏನು ಮಾಡುತ್ತೀರಾ ಮಾಡಿಕೊಳ್ಳಿ ಮನೆಯೊಳಕ್ಕೆ ಯಾರನ್ನು ಬಿಡುವುದಿಲ್ಲ ಎಂದು ಹೇಳಿದರು. ಆಗ ನನ್ನ ಜೊತೆಯಲ್ಲಿ ಬಂದಿದ್ದ ಮಹಿಳಾ ಸಿಬ್ಬಂದಿಗಳಾದ ಕುಮಾರಿ ಶೋಭಾ ಹಾಗೂ ಶ್ರೀಮತಿ ಹೇಮಾರವರ ಸಮವಸ್ತ್ರಗಳನ್ನು ಹಿಡಿದು ಎಳೆದಾಡಿ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳುತ್ತಾರೆ ನಂತರ ನಾವು ಠಾಣೆಗೆ ಹಾಜರಾಗಿ ಈ ವಿಷಯದ ಬಗ್ಗೆ ಮಾನ್ಯ ಉಪ ಪೊಲೀಸ್ ಆಯುಕ್ತರು ಅವರು ಹಾಗೂ ಉಪ ಪೊಲೀಸ್ ಆಯುಕ್ತರು ಸಾಹೇಬರ ಮುಂದೆ ನಡೆದ ವಿಷಯದ ಬಗ್ಗೆ ವರದಿ ಮಾಡಿಕೊಂಡರು ಅದರಂತೆ ಪಿ.ಎಸ್.ಐ ಅವರು ನೀಡಿದ ದೂರಿನ ಮೇರೆಗೆ ಠಾಣೆ ಕ್ರಮ ಸಂಖ್ಯೆ 185/2020 ಕಲಂ: 353, 504, 506 ರೆ/ವಿ 34 ಐಪಿಸಿ ದಾಲಿಸಿದ್ದಾರೆ. ನಾನು ಮತ್ತು ಇತರ ಸಿಬ್ಬಂದಿಯವರು ಮಾನ್ಯ ಪೊಲೀಸ್ ಆಯುಕ್ತರ ಆದೇಶದ ಮೇರೆಗೆ ರೌಡಿ ಆಸಾಮಿ ಶ್ರೀ ಅಂಬರೀಶನಿಗೆ ಬಂಧನದ ಆದೇಶವನ್ನು ಜಾರಿಗೊಳಿಸಲು ಹೇಳಿದಾಗ ಅಂಬರೀಶನ ಪತ್ನಿ ಶ್ರೀಮತಿ ಜಯಲಕ್ಷ್ಮಿ ಹಾಗೂ ಅವರ ಅಕ್ಕ ಶ್ರೀಮತಿ ರಂಜನಿ ಮತ್ತು ಪವಿತ್ರ ರವರು ನಮ್ಮ ವಿಧಿಬದ್ದ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದರಿಂದ ನಾನು ಅವರ ವಿರುದ್ದ ದೂರು ನೀಡಿದ್ದರಿಂದ ದುರುದ್ದೇಶ ಪೂರ್ವಕವಾಗಿ ರೌಡಿ ಅಸಾಮಿ ಶ್ರೀ ಅಂಬರೀಶರವರ ಪತ್ನಿ ಶ್ರೀಮತಿ ಜಯಲಕ್ಷ್ಮಿ ಅವರು ನನ್ನ ವಿರುದ್ದ ಸುಳ್ಳು ದೂರುಗಳನ್ನು ನೀಡಿದ್ದಾರೆ. ಶ್ರೀಮತಿ ಜಯಲಕ್ಷ್ಮಿ ಅವರು ನನ್ನ ವಿರುದ್ದ ಮಾಡಿರುವ ಎಲ್ಲಾ ಅಪಾದನೆಗಳೂ ಸುಳ್ಳಾಗಿರುತ್ತದೆ. ನಾನು ಶ್ರೀಮತಿ ಜಯಲಕ್ಷ್ಮಿರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಲಿ ಅಥವಾ ಅವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಹಾಗೂ ಅವರನ್ನು ಠಾಣೆಗೆ ಕರೆದುಕೊಂಡು ಬಂದಿರುವುದಿಲ್ಲ. ಶ್ರೀಮತಿ ಜಯಲಕ್ಷ್ಮಿ ಅವರು ಹುಳಿಮಾವು ಠಾಣೆಗೆ ರಾತ್ರಿ 12 ಗಂಟೆಗೆ ರಂಜನಿ ಜೊತೆಗೆ ಠಾಣೆಗೆ ಕರೆದುಕೊಂಡು ಹೋಗಿದ್ದೆ ಅದನ್ನು ನಮ್ಮ ಟವರ್ ಮೊಬೈಲ್ ಲೊಕೇಶನ್ ಪತ್ತೆ ಮಾಡುವುದಕ್ಕೆ ಹೇಳಿ ನಾನು ಎಲ್ಲಿ ಇದ್ದೆ ಎಂದು ಗೊತ್ತಾಗುತ್ತೆ ಅಂತ ಪ್ರಶ್ನಿಸಿದ್ದಾಗ ಶ್ರೀ ಚಿದಾನಂದರವರು ಶ್ರೀಮತಿ ಜಯಲಕ್ಷ್ಮಿ ಮನೆಯ ಹಿಂಭಾಗದಲ್ಲಿ ಇದ್ದಾರೆ ಅಂತ ಹೇಳಿದರು."

ಮುಂದುವರೆದು ದಿನಾಂಕ:9.10.2020 ರ ಮದ್ಯರಾತ್ರಿ 12.00 ಗಂಟೆಯಿಂದ ದಿನಾಂಕ:10.10.2020ರ ಸಂಜೆ 6.00 ಗಂಟೆಯವರೆಗೂ ದೂರುದಾರರೊಂದಿಗೆ ಶ್ರೀಮತಿ ರಜಿನಿ ರವರನ್ನು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಇರಿಸಿರುವುದಾಗಿ ದೂರುದಾರರು ಮಾಡಿರುವ ಆಪಾದನೆಯ ಬಗ್ಗೆ ಆಯೋಗದ ಡಿ.ವೈ.ಎಸ್.ಪಿಯಾದ ಶ್ರೀ ಮಂಜುನಾಥ ರವರಿಗೆ ಶ್ರೀಮತಿ ಜಯಲಕ್ಷ್ಮಿ ರವರ ಮೊಬೈಲ್

ಸಂಖ್ಯೆ.9739463714ರ ಟವರ್ ಲೋಕೇಶನ್ ಹಾಗೂ ದೂರುದಾರರನ್ನು ಪೊಲೀಸ್ ಠಾಣೆಗೆ ಕರೆದೊಯ್ಯುವುದಕ್ಕೆ ಸಾಕ್ಷಿಯಾಗಿರುವ ಮನೆಯ ಮಾಲೀಕರಾದ ಶ್ರೀಮತಿ ನಂದಿನಿರವರನ್ನು ವಿಚಾರಣೆ ಮಾಡಿ ವರದಿ ನೀಡುವಂತೆ ಆದೇಶಿಸಿದ್ದು, ದಿನಾಂಕ.16.04.2021 ರಂದು, ದಿನಾಂಕ.12.04.2021ರ ಪತ್ರದ ಅನ್ವಯ ವರದಿ ಸಲ್ಲಿಸಿರುತ್ತಾರೆ. ಡಿ.ವೈ.ಎಸ್.ಪಿ ರವರ ವರದಿಯ ಅಭಿಪ್ರಾಯವು ಈ ಕೆಳಕಂಡಂತಿದೆ:

> "ಮಾನ್ಯ ಆಯೋಗವು ಆದೇಶಿಸಿರುವಂತೆ ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರ ಮೊಬೈಲ್ ದೂರವಾಣಿ ಸಂ. 9739463714 ಗೆ ಸಂಬಂಧಿಸಿದ ಟವರ್ ಲೋಕೇಶನ್/ಸಿ.ಡಿ.ಆರ್ ವರದಿಯನ್ನು ಪಡೆದು ಪರಿಶೀಲಿಸಲಾಗಿ ಶ್ರೀಮತಿ ಜಯಲಕ್ಷ್ಮಿ ರವರು ದಿನಾಂಕ.09.10.2020 ರಂದು ಮಧ್ಯಾಹ್ನ 14–00 ಗಂಟೆಯಿಂದ ದಿನಾಂಕ.10.10.2020 ರಂದು ಮುಂಜಾನೆ 00–32 ಗಂಟೆಯವರೆವಿಗೂ ಟವರ್ ಲೊಕೇಷನ್ "Classictimecentre, No.245, Hulimavu Main Road, BG Road, Bangalore-76, Contact No.9480338129" ನ್ನು ಬಳಸಿರುವುದು ಕಂಡು ಬಂದಿರುತ್ತದೆ. ದಿನಾಂಕ.10.10.2020 ರಂದು ಮುಂಜಾನೆ 00–39 ಗಂಟೆಯಿಂದ ಸಂಜೆ 18–37 ಗಂಟೆಯವರೆಗೆ ಟವರ್ ಲೋಕೇಶನ್ "No.70/26, Opp to Ramalingeshwara Temple, Hulimavu Village, BG Road, Bangalore-560068" ನ್ನು ಬಳಸಿರುವುದು ಕಂಡು ಬಂದಿರುತ್ತದೆ. ಪುನ: ದಿನಾಂಕ. 10.10.2020 ರಂದು ಸಂಜೆ 19–06 ಗಂಟೆಯ ನಂತರ ಟವರ್ ಲೋಕೇಶನ್ "Classictimecentre, No.245, Hulimavu Main Road, BG Road, Bangalore-76, Contact No.9480338129" ನ್ನು ಬಳಸಿರುವುದು ಟವರ್ ಲೋಕೇಶನ್/ಸಿ.ಡಿ.ಆರ್ ವರದಿಯಿಂದ ಸ್ಪಷ್ಟವಾಗಿರುತ್ತದೆ.
>
> ಶ್ರೀಮತಿ ನಂದಿನಿ.ವಿ ರವರು ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರಿಗೆ ದಿನಾಂಕ.28.07.2020 ರಿಂದ 2 ವರ್ಷಗಳ ಕಾಲ ಬಾಡಿಗೆಗೆ ಮನೆ ನೀಡಿದ್ದು, ಕರಾರು ಪತ್ರ ಮಾಡಿಸಿರುತ್ತಾರೆ. ಆದ್ದರಿಂದ, ಶ್ರೀಮತಿ ನಂದಿನಿ.ವಿ ರವರು ಶ್ರೀಮತಿ ಜಯಲಕ್ಷ್ಮಿ ರವರ ಮನೆಯ ಮಾಲೀಕರು ಎಂಬುದು ಕಂಡು ಬಂದಿರುತ್ತದೆ. ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರನ್ನು ದಿನಾಂಕ.10.10.2020 ರಂದು ಮುಂಜಾನೆ ಸುಮಾರು 00–30 ಗಂಟೆಗೆ ಹುಳಿಮಾವು ಪೊಲೀಸ್ ಠಾಣೆಯ ಸಿಬ್ಬಂದಿಗಳು ತಮ್ಮ ಠಾಣಾ ವಾಹನದಲ್ಲಿ ಕೂರಿಸಿಕೊಂಡು ಹೋಗಿರುವುದನ್ನು ಪ್ರತ್ಯಕ್ಷವಾಗಿ ನೋಡಿದ್ದು, ಸಂಜೆ ಸುಮಾರು 06–00 ಗಂಟೆಗೆ ಶ್ರೀಮತಿ ಜಯಲಕ್ಷ್ಮಿ ಮತ್ತು ಆಕೆಯ ಅಕ್ಕ ಶ್ರೀಮತಿ ರಜನಿ ರವರುಗಳನ್ನು ವಾಪಸ್ಸು ತಮ್ಮ ಮನೆಯಲ್ಲಿ ಕಂಡು, ಅವರನ್ನು ವಿಚಾರ ಮಾಡಲಾಗಿ ಆಕೆಯು ತನ್ನ ಗಂಡನಿಗೆ ಸಂಬಂಧಿಸಿದಂತೆ ವಿಚಾರಕ್ಕಾಗಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ಮಹಿಳಾ ಪೊಲೀಸ್ ಶ್ರೀಮತಿ ಜಯಲಕ್ಷ್ಮಿ ರವರನ್ನು ಹೊಡೆದಿರುತ್ತಾರೆಂದು ತಿಳಿದುಬಂದಿರುವ ಮಾಹಿತಿಯು ಅವರ ಹೇಳಿಕೆಯಿಂದ ಕಂಡು ಬಂದಿರುತ್ತದೆ.

ಈ ಹೆಚ್.ಆರ್.ಸಿ ಪ್ರಕರಣದ ವಿಚಾರಣಾ ಕಾಲದಲ್ಲಿ ಇದುವರೆವಿಗೂ ದಾಖಲಿಸಿದ ಹೇಳಿಕೆ ಮತ್ತು ಸಂಗ್ರಹಿಸಿದ ದಾಖಲಾತಿಗಳಿಂದ ದೂರುದಾರರಾದೆ ಜಯಲಕ್ಷ್ಮಿ ರವರು ಶ್ರೀಮತಿ ನಂದಿನಿ.ವಿ ರವರ ಮನೆಯಲ್ಲಿ ಪ್ರಸ್ತುತ ಬಾಡಿಗೆಗೆ ವಾಸವಾಗಿದ್ದು, ದಿನಾಂಕ.10.10.2020 ರಂದು ಹುಳಿಮಾವು ಪೊಲೀಸರು ಮುಂಜಾನೆ 00–39 ಗಂಟೆಗೆ ಠಾಣೆಗೆ ಕರೆದುಕೊಂಡು ಹೋಗಿದ್ದು ದಿನಾಂಕ. 10.10.2020 ರಂದು ಸಂಜೆ 18–37 ಗಂಟೆಯ ನಂತರ ಠಾಣೆಯಿಂದ ಬಿಟ್ಟು ಕಳುಹಿಸಿರುವುದು ದೂರುದಾರರ ಮೊಬೈಲ್ ಸಂ.9739463714 ಟವರ್ ಲೊಕೇಶನ್ ವರದಿಯಿಂದ ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯದ ವರದಿಯೊಂದಿಗೆ ಮೇಲ್ಕಂಡ ಸಾಕ್ಷೀದಾರರ ಹೇಳಿಕೆಗಳು ಮತ್ತು ದಾಖಲಾತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಆಯೋಗಕ್ಕೆ ಸಲ್ಲಿಸಿದೆ."

ಪೊಲೀಸರ ವರದಿ, ದೂರುದಾರರ ಅಭಿಪ್ರಾಯ, ದೂರುದಾರರ ಹೇಳಿಕೆಗಳು ಹಾಗೂ ಆಯೋಗದ ಡಿವೈ.ಎಸ್.ಪಿ ರವರು ನೀಡಿರುವ ವರದಿಯ ಮೇರೆಗೆ ಶ್ರೀಮತಿ ಜಯಲಕ್ಷ್ಮಿ ರವರು ದಿನಾಂಕ.10.10.2020 ರಂದು ರಾತ್ರಿ 12–30 ಗಂಟೆಯಿಂದ 10.10.2020 ಸಂಜೆ 6–30 ಗಂಟೆವರೆಗೆ ಹುಳಿಮಾವು ಪೊಲೀಸ್ ಠಾಣೆಯಲ್ಲಿರುವುದು ಟವರ್ ಲೋಕೇಶನ್‌ನಿಂದ ಕಂಡು ಬಂದಿರುತ್ತದೆ. ಇದರೊಂದಿಗೆ, ಶ್ರೀಮತಿ ನಂದಿನಿ.ವಿ ರವರ ಹೇಳಿಕೆಯಲ್ಲಿ ಹುಳಿಮಾವು ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಚಿದಾನಂದ ನಾವಿ ರವರು ಶ್ರೀಮತಿ ಜಯಲಕ್ಷ್ಮಿ ರವರನ್ನು ಅವರ ಮನೆಯಿಂದ ದಿನಾಂಕ.10.10.2020 ರಂದು ಮದ್ಯ ರಾತ್ರಿ 12–30 ಗಂಟೆಗೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಸಂಜೆ 6–30 ಗಂಟೆವರೆಗೆ ಪೊಲೀಸ್ ಠಾಣೆಯಲ್ಲಿ ಇಟ್ಟಿರುವುದು ಕಂಡು ಬಂದಿರುತ್ತದೆ. ಸೂರ್ಯಾಸ್ತಮದ ನಂತರ ಮತ್ತು ಸೂರ್ಯೋದಯದ ಮುಂಚಿತವಾಗಿ ಯಾವುದೇ ಒಬ್ಬ ಮಹಿಳೆಯನ್ನು ಪೊಲೀಸ್ ಠಾಣೆಯಲ್ಲಿ ಇಟ್ಟುಕೊಳ್ಳುವುದು ಕಾನೂನು ಬಾಹಿರವಾಗಿರುತ್ತದೆ. ಆದರೆ ಶ್ರೀ ಚಿದಾನಂದ್ ನಾವಿ ರವರು ಶ್ರೀಮತಿ ಜಯಲಕ್ಷ್ಮಿ ರವರನ್ನು ಮದ್ಯರಾತ್ರಿ 12–30 ಗಂಟೆಗೆ ಪೊಲೀಸ್ ಠಾಣೆಗೆ ಕರೆದೋಯ್ದಿದ್ದಲ್ಲದೇ ದೈಹಿಕ ಹಲ್ಲೆ ಹಾಗೂ ಮಾನಸಿಕ ಕಿರುಕುಳ ನೀಡಿರುವುದು ದೂರುದಾರರಾದ ಶ್ರೀಮತಿ ಜಯಲಕ್ಷ್ಮಿ ರವರ ಹೇಳಿಕೆಯಲ್ಲಿ ಹಾಗೂ ವಿಚಾರಣಾ ಕಾಲದಲ್ಲಿ ಕಂಡುಬಂದಿರುತ್ತದೆ.

ಪಿ.ಎಸ್.ಐ ಶ್ರೀ ಚಿದಾನಂದ ನಾವಿ ರವರು ಶ್ರೀಮತಿ ಜಯಲಕ್ಷ್ಮಿ ರವರನ್ನು ಪೊಲೀಸ್ ಠಾಣೆಗೆ ಕರೆದೋಯ್ಯಲಾಗಿದೆ ಮತ್ತು ಹಲ್ಲೆ ಮಾಡಿರುತ್ತಾರೆ ಅಥವಾ ಅವರದೊಂದಿಗೆ ಕಠಿಣವಾಗಿ ವರ್ತಿಸಿರುತ್ತಾರೆಂದು ಹೇಳಿರುವುದನ್ನು ನಿರಾಕರಿಸಿದ್ದಾರೆ. ಆದರೆ ದಿನಾಂಕ.10.10.2020 ರಂದು ಶ್ರೀಮತಿ ಜಯಲಕ್ಷ್ಮಿ ರವರನ್ನು ಮದ್ಯರಾತ್ರಿ 12–30 ಗಂಟೆಗೆ ಪೊಲೀಸ್ ಠಾಣೆಗೆ ಕರೆದೋಯ್ಯಲಾಗಿದೆ ಎಂದು ಶ್ರೀಮತಿ ನಂದಿನಿ.ವಿ ರವರ ಹೇಳಿಕೆಯಿಂದ ಹಾಗೂ ಶ್ರೀಮತಿ ಜಯಲಕ್ಷ್ಮಿ ರವರು ಪೊಲೀಸ್ ಠಾಣೆಯಲ್ಲಿ ಇರುವುದಕ್ಕೆ ಅವರ ಮೊಬೈಲ್ ಟವರ್ ಲೋಕೇಶನ್‌ನಿಂದ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

> ದೂರರ್ಜಿದಾರರಾದ ಶ್ರೀಮತಿ ಜಯಲಕ್ಷ್ಮಿ ರವರಿಗೆ ರೂ. 25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಜರೂರಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಹುಳಿಮಾವು ಪೊಲೀಸ್ ಠಾಣೆಯ ಪಿ.ಎಸ್.ಐ ಆದ ಶ್ರೀ ಚಿದಾನಂದ ನಾವಿ ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಶ್ರೀ ಚಿದಾನಂದ ನಾವಿ, ಪಿ.ಎಸ್.ಐ, ಹುಳಿಮಾವು ಪೊಲೀಸ್ ಠಾಣೆ ರವರ ವೇತನದಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 04-10-2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.